## ಕಳೆದ ಸಂಚಿಕೆಯಲ್ಲಿ...



ತನ್ನನ್ನು ಹಿಂಬಾಲಿಸುತ್ತಿರುವುದು ಶೆಟ್ಟರು ಕಳುಹಿಸಿದ ಹುಡುಗ ಎನ್ನುವುದು ತಿಳಿದ ಮೇಲೆ ಸಂಜಯನಿಗೆ ಭೂತಪಿಶಾಚಿಗಳ ಭಯ ನಿವಾರಣೆಯಾಯಿತು. ಭೂತದಕೋಲ ನಡೆಯುವ ವಿಷಯ ತಿಳಿದು, ಅದನ್ನು ನೋಡಲು ಆಶಾಳೊಂದಿಗೆ ಹೋದ. ಪಂಜುರ್ಲಿ ಭೂತದೈವ ಜನರ ಪ್ರಶ್ನೆಗಳಿಗೆ ಉತ್ತರ ಕೊಡಲು ಸಿದ್ಧವಾಗುತ್ತಿತ್ತು. ಊರಿಗೆ ಬಂದ ವ್ಯಕ್ತಿಯಿಂದ ತಮಗೇನಾದರೂ ಕೇಡಾಗುವುದಾ ಎಂದು ಶೆಟ್ಟರು ಮಾಡಿದ ಪ್ರಶ್ನೆಗೆ, 'ಆ ವ್ಯಕ್ತಿಯಿಂದ ಯಾರಿಗೂ ಕೆಡುಕಾಗುವುದಿಲ್ಲ' ಎಂದು ಪಂಜುರ್ಲಿ ಅಭಯ ನೀಡಿತು. ಪಂಜುರ್ಲಿ ನೀಡಿದ ಅಭಯದಿಂದ ಶೆಟ್ಟರು ಮತ್ತು ಆನಂದಣ್ಣನಿಗೆ ಸಂತೋಷವಾಯಿತು. ಮರುದಿನ ಅವರಿಬ್ಬರನ್ನು ಭೇಟಿಯಾದ ಸಂಜಯ, ತಾನು ಆಸ್ತಿಗಾಗಿ ಅಲ್ಲಿಗೆ ಬಂದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದ. ಈವರೆಗೆ ಎದುರಾಳಿಯಂತೆ ಕಾಣುತ್ತಿದ್ದ ವ್ಯಕ್ತಿ ಈಗ ಆಪ್ತನಂತೆ ಕಾಣಿಸತೊಡಗಿದ. ಜಗತ್ತಿನ ಪಾಲಿಗೆ ಅಜ್ಞಾತವಾಗಿರುವ ಈ ಊರನ್ನು ತಂತ್ರಜ್ಞಾನ ಬಳಸಿಕೊಂಡು ಜನಪ್ರಿಯವಾಗಿಸುವ ತನ್ನ ಯೋಜನೆಯನ್ನು ಸಂಜಯ ವಿವರಿಸಿದ. ಹೊಸ ಬಗೆಯ ರಿಯಾಲಿಟಿ ಶೋಗೆ ಊರನ್ನು ಅಣಿಗೊಳಿಸಲು ಸಂಜಯ ಮುಂದಾದ.

---

ಬುದ್ಧಿ. ನಾನು ಅವನಿಗೆ ಕ್ಲಾಸಿನ ನಂತರವೂ ಹೇಳಿಕೊಡ್ತಿದ್ದೆ' ಎಂದರು ಮಾಸ್ತ್ರು.

ಸಂಜಯ್ 'ಹೌದು, ಅಪ್ಪ ನಿಮ್ಮ ಬಗ್ಗೆ ತುಂಬಾ ಹೇಳ್ತಿದ್ರು. ನಿಮ್ಮ ಪಾಠ ಅಂದರೆ ಅವರಿಗೆ ಬಾರೀ ಇಷ್ಟ ಇತ್ತಂತೆ' ಅಂದ.

ಮಾಸ್ತ್ರು ಸಂಜಯನ ಹತ್ತಿರ ಅವನ ಅಪ್ಪನ ಸಾವಿನ ಬಗ್ಗೆ ವಿಚಾರಿಸಿ ತಿಳಿದುಕೊಂಡರು. ಸಂತಾಪ ಸೂಚಿಸಿದರು.

ಸಂಜಯ್ ಮುಂದುವರಿಸುತ್ತಾ 'ನಮಗೂ ನಿಮ್ಮ ಪಾಠ ಕೇಳುವ ಅವಕಾಶ ಸಿಕ್ಕಿತು. ನಾವು ಈ ರೂಮಲ್ಲೇ ಇದ್ದುಕೊಂಡು ನಿಮ್ಮ ವೈರಸ್ ಬಗೆಗಿನ ಪಾಠ ಕೇಳಿದೆವು' ಅಂದ.

'ನನಗೆ ನಿವೃತ್ತಿ ಆಗಿ ವರ್ಷ ಕೆಲವು ಆಯ್ತು ನೋಡಿ, ಆದರೆ ಮನೆಯಲ್ಲಿ ಕೂತ್ಕೊಳ್ಳಿಕ್ಕೆ ಆಗುವುದಿಲ್ಲ' ಎಂದರು ಮಾಸ್ತ್ರು.

ಸಂಜಯ್ 'ಮಾಸ್ಟ್ರೇ, ಈ ಊರಲ್ಲಿ ಇಷ್ಟು ಸ್ಪಷ್ಟವಾಗಿ ವೈರಸ್ ಬಗ್ಗೆ ನಿಮ್ಮಿಂದಲೇ ಕೇಳಿದ್ದು. ನಾನು ಸೀತಾಪುರಕ್ಕೆ ಬರುವಾಗ ನನಗೆ **Herpes zoster** ಎಂಬ ವೈರಸ್ ಕಾಯಿಲೆ ಇತ್ತು. ಶಾಸ್ತ್ರಿಗಳು ಮದ್ದು ಕೊಟ್ಟು ಗುಣ ಆಯ್ತು. ಆದರೆ ಶಾಸ್ತ್ರಿಗಳು ವೈರಸ್ ಎಲ್ಲಾ ನಂಬುವುದಿಲ್ಲ. ಅದಕ್ಕೆಲ್ಲಾ ತಲೆ ಕೆಡಿಸಿಕೊಳ್ಬೇಡ ಅಂತಾರೆ' ಅಂದ.

ಮಾಸ್ತ್ರು 'ನಮ್ಮ ಶಾಸ್ತ್ರಿಗಳಾ? ಅವರು ಆಯುರ್ವೇದ ಪಂಡಿತರು. ಅವರು ಕಾಯಿಲೆಯನ್ನು ಹಾಗೂ ರೋಗಾಣುಗಳನ್ನು ದೇಹದಿಂದ ಬೇರೆಯಾಗಿ ನೋಡುವುದಿಲ್ಲ. ಹೀಗಾಗಿ ಅವರು ವೈರಸ್ ಆಗಲಿ, ಬ್ಯಾಕ್ಟೀರಿಯಾ ಆಗಲಿ ವಿಶೇಷವಾಗಿ ನೋಡುವುದಿಲ್ಲ. ಅವರಿಗೆ ಇದೆಲ್ಲ ಪ್ರಕೃತಿಯ ಅಂಗ. ಅದು ಬಿಡಿ, ಅವರು ಅನವಶ್ಯವಾಗಿ ಮದ್ದಿನ ಗಿಡಗಳನ್ನೂ ಬೇರು ತೊಗಟೆಗಳನ್ನೂ ಪ್ರಕೃತಿಯಿಂದ ತೆಗೆಯುವುದಿಲ್ಲ. ಊರವರಿಗೆ ಕಾಯಿಲೆ ಬಂದ್ರೆ ಮಾತ್ರ' ಅಂದರು.

ಶೆಟ್ರು 'ಮಾಸ್ಟ್ರೇ, ನಾವು ಹೊರಡಬಹುದಾ?' ಅಂತ ಕೈಮುಗಿದು ಪ್ರಶ್ನಿಸಿದರು. ಆನಂದಣ್ಣ ಹಾಗೂ ಸಂಜಯ್ ಮಾಸ್ತರಿಗೆ ನಮಸ್ಕಾರ ಮಾಡಿ ಮೇಲೆದ್ದರು. ಇಷ್ಟೆಲ್ಲಾ ಆಗಿ ಅವರು ಹಿಂದೆ ಬರುವಾಗ ಸಾಯಂಕಾಲ ನಾಲ್ಕು ಗಂಟೆ ಆಯಿತು. ಶೆಟ್ಟರು ಮತ್ತು ಆನಂದಣ್ಣ ಸಂಜಯನನ್ನು ಶಾಸ್ತ್ರಿಗಳ ಮನೆಯಲ್ಲಿ ಬಿಟ್ಟು ತಮ್ಮ ಮನೆಗೆ ನಡೆದರು.

ಸೀತಮ್ಮ ಸಂಜಯನನ್ನು ನೋಡಿ 'ಏನೋ ಸಂಜಯ್, ಬಹಳ ತಡ ಆಯಿತು... ಊಟ ಬಡಿಸ್ಲಿಯಾ?' ಕೇಳಿದರು.

ಸಂಜಯ್ 'ಬೇಡಮ್ಮ, ಹೊರಗೆ ಏನೋ ತಿಂದೆ' ಅಂದ.

ಎಂದಿನಂತೆ ಸಂಜಯ್ ಸಂಜೆಯ ಹೊತ್ತು ಆಶಾಳ ಜೊತೆ ಗುಡ್ಡಕ್ಕೆ ಹೊರಟ. ಈಗ ದಾರಿ ಪರಿಚಿತವಾಗಿತ್ತು. ಆದರೂ ಕಾಡುಮೃಗಗಳ ಹೆದರಿಕೆ ಇತ್ತು. ಆಶಾ ಇದ್ದರೆ ಏನೋ ಧೈರ್ಯ. ದಾರಿಯುದ್ದಕ್ಕೂ ಆಶಾ ಎಂದಿನಂತೆ ಮಾತನಾಡತೊಡಗಿದಳು. ಸಂಜಯನಿಗೆ ಒಂದೇ ಕೆಲಸ – ಅದು ಅವಳು ಹೇಳುವುದನ್ನು ಕೇಳುವುದು ಮತ್ತು 'ಹ್ಞೂಂ' ಅಂತ ಹೇಳುವುದು. ಸಂಜಯನಿಗೆ ಇದು ಅಭ್ಯಾಸ ಆಗಿತ್ತು. ಗುಡ್ಡದ ತುದಿ ಸೇರಿದ ಕೂಡಲೇ ಸಂಜಯ್ ತನ್ನ ಬ್ಯಾಗ್ ಕೆಳಗಿಳಿಸಿ ಎಂದಿನಂತೆ ಲ್ಯಾಪ್‌ಟಾಪ್ ಬಿಡಿಸತೊಡಗಿದ. ಹತ್ತಿರದಲ್ಲಿ ಒಂದು ದೊಡ್ಡ ಕಪ್ಪೆ ಬಂದು ಕೂತು ಸಂಜಯನ ಕಡೆ ನೋಡಲು ಶುರುಮಾಡಿತು! ಶ್! ಅಂತ ಸಂಜಯ್ ಕಪ್ಪೆಯನ್ನು ಓಡಿಸಲು ಪ್ರಯತ್ನಪಟ್ಟ. ಆಶಾ ನಗುತ್ತಾ 'ಓಹೋ ಗೋಂಕುರು ಕಪ್ಪೆ ಬಂದಿದೆ. ಇವತ್ತು ಮಳೆ ಬರ್ತದೆ' ಅಂದಳು.

ಮೂಢನಂಬಿಕೆಗೂ ಒಂದು ಮಿತಿ ಬೇಕು ಎಂದು ತನ್ನಷ್ಟಕ್ಕೆ ಗೊಣಗುತ್ತಾ ಸಂಜಯ್ ಲ್ಯಾಪ್‌ಟಾಪ್ ಬಿಡಿಸಿದ. ಅಲ್ಲಿ **weather.com**ಗೆ ಹೋಗಿ ಸೀತಾಪುರದ ಹವಾಮಾನ ನೋಡಿದ. ಹಾಗೇ ಆಶಾಳ ಕಡೆಗೆ ತಿರುಗಿ 'ಆಶಾ, ಮಳೆ ಇವತ್ತು ಬಿಡು, ಇನ್ನೊಂದು ವಾರ ಬರುವ ಹಾಗಿಲ್ಲ. ಸುಮ್ಮಸುಮ್ಮನೇ ಹೇಳ್ಬೇಡ... ಮಳೆಗೂ ಈ ಕಪ್ಪೆಗೂ ಏನು ಸಂಬಂಧ?' ಅನ್ನುತ್ತಾ ನಕ್ಕ.

'ಮಳೆಗೂ ನಿಮ್ಮ ಈ ಲ್ಯಾಪ್‌ಟಾಪ್‌ಗೂ ಏನು ಸಂಬಂಧ?' ಅಂತ ಆಶಾ ತಿರುಗಿ ಕೇಳಿದಳು.

ಇವಳಲ್ಲಿ ಮಾತಾಡಿ ಪ್ರಯೋಜನ ಇಲ್ಲ ಅಂದುಕೊಂಡು ಸಂಜಯ್ ತಮಾಷೆಗಾಗಿ ಕೈಮುಗಿದು, 'ಆಶಾಮ್ಮ, ನೀವು ಹೇಳಿದ್ದೇ ಸರಿ. ಆದರೂ ಈ ಕಪ್ಪೆಗೆ ಜಗತ್ತಿನ ಎಲ್ಲಾ ಸ್ಯಾಟಲೈಟ್‌ಗಳಿಗಿಂತ ಜಾಸ್ತಿ ಗೊತ್ತಿದೆ ಎಂದು ನಿಮಗೆ ಗೊತ್ತಾ? ಹಾಗೇ ಆಗಲಿ. ನಾನು ಬೇಗ ಕೆಲಸ ಮುಗಿಸ್ತೇನೆ' ಎಂದವನೇ ಕೆಲಸ ಮಾಡತೊಡಗಿದ. ನಂತರ ಫೋನ್ ಮಾಡಿ ಅಮೆರಿಕನ್ನರ ಜೊತೆ ಮಾತಾಡಿದ.

ಆಶಾ ಗುಡ್ಡದಲ್ಲಿ ಅಲೆದಾಡಿ ಹೂವು ಚಿಗುರು ಕೊಯ್ದಾದರೂ ಸಂಜಯನ ಮಾತು ಮುಗಿಯಲಿಲ್ಲ. ಅಷ್ಟರಲ್ಲಿ ಆಶಾ ಸಂಜಯನ ಹತ್ತಿರ ಬಂದು ಕೈಸನ್ನೆಯಲ್ಲಿ ಸೂರ್ಯ ಮುಳುಗುವುದನ್ನೂ ಸಂಜೆಯಾಗುವುದನ್ನೂ ತೋರಿಸಿದಳು. ಇನ್ನೇನು ಕತ್ತಲಾಗುತ್ತದೆ ಎನ್ನುವಾಗ ಇಬ್ಬರೂ ಮನೆಗೆ ಬರತೊಡಗಿದರು.

ಮನೆ ಹತ್ತಿರ ಆಗುವಾಗ ಜೋರಾಗಿ ಗಾಳಿಯೊಂದಿಗೆ ಮಳೆಯ ಹನಿಯೂ ಬೀಳಲು ಶುರುವಾಯ್ತು. ಆಶಾ ಜೋರಾಗಿ ನಗಲು ಪ್ರಾರಂಭಿಸಿದಳು. ಸಂಜಯ್ ಕಷ್ಟದಿಂದ ತನ್ನ ಲ್ಯಾಪ್‌ಟಾಪ್, ಕ್ಯಾಮೆರಾ, ಸೆಲ್ ಫೋನನ್ನು ಮಳೆಹನಿಗಳಿಂದ ರಕ್ಷಿಸಲು ಪ್ರಯತ್ನಪಡುವುದರಲ್ಲಿ ತೊಡಗಿದ.

ಆಶಾ ಹೇಳಿದಳು, 'ನಿಮ್ಮ ಲ್ಯಾಪ್‌ಟಾಪ್ ನಂಬಿದರೆ ಇದೇ ಗತಿ. ಇಲ್ಲಿ ಕೊಡಿ, ಕೊನೆಯಪಕ್ಷ ಅದನ್ನು ನನ್ನ ಸೆರಗಲ್ಲಿ ಸುತ್ತಿಕೊಳ್ತೇನೆ. ಮಳೆ ನೀರು ಹೋದರೆ ಹಾಳಾದೀತು...' ಅಂದಳು.

ಸಂಜಯನಿಗೆ ಅವಮಾನ ಆಯಿತು. 'ಬೇಡ, ನನ್ನ ಲ್ಯಾಪ್‌ಟಾಪ್ ಅನ್ನು ನಾನೇ ಹಿಡ್ಕೊಳ್ತೇನೆ' ಅನ್ನುತ್ತಾ ಮುಖ ಗಂಟಿಕ್ಕಿದ.

ಇಬ್ಬರೂ ಓಡುತ್ತಾ ಮನೆಗೆ ತಲುಪಿದರು.

ಮನೆಗೆ ಬರುವಾಗ ಶಾಸ್ತ್ರಿಗಳೂ ಸೀತಮ್ಮನೂ ಜಗಲಿಯಲ್ಲಿ ಕೂತಿದ್ದರು. ಅವರನ್ನು ನೋಡಿದವಳೇ ಆಶಾ ಬಿದ್ದು ಬಿದ್ದು ನಗತೊಡಗಿದಳು. 'ಏನಮ್ಮ ಆಶಾ... ಯಾಕೆ ಅಷ್ಟು ನಗುತ್ತೀಯಾ' ಅಂದರು ಸೀತಮ್ಮ.

'ನೋಡಿ ಅಜ್ಜಿ, ಗುಡ್ಡೆಯಲ್ಲಿರುವಾಗ ನಾನು ಗೋಂಕುರು ಕಪ್ಪೆ ನೋಡಿದೆ. ಈಗ ಮಳೆ ಬರ್ತದೆ, ಬೇಗ ಮನೆಗೆ ಹೋಗುವ ಹೇಳಿದೆ. ಇವರು ಆ ಗೊಡ್ಡು ಲ್ಯಾಪ್‌ಟಾಪ್‌ನಲ್ಲಿ ಏನನ್ನೋ ನೋಡಿ ಇವತ್ತು ಬಿಡು, ಇನ್ನೊಂದು ವಾರ ಮಳೆ ಬರುವುದಿಲ್ಲ ನೋಡು ಅಂದರು. ಈಗ ನೋಡಿ, ಹೇಗೆ ಲ್ಯಾಪ್‌ಟಾಪ್ ಅನ್ನು ಉಳಿಸಿಕೊಳ್ಳಿಕ್ಕೆ ಎಷ್ಟು ಕಷ್ಟ ಪಡ್ತಿದ್ದಾರೆ' ಅನ್ನುತ್ತಾ ಆಶಾ ನಕ್ಕಳು.

'ಸಾಕು ಬಿಡೇ, ನಿನಗೆ ಎಲ್ಲ ತಮಾಷೆ. ಪಾಪ